ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವಿವರ

36(502):- ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಸಮಾಜ ಇಲಾಖೆಯ ಅಡಿಯಲ್ಲಿ ನಡೆಯುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು ಮತ್ತು ಮೊರಾರ್ಜಿ ದೇಸಾಯಿ ವಸತಿಶಾಲೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು.

2. ಈ ಶಾಲೆಗಳಿಗೆ ಎಷ್ಟು ಕಟ್ಟಡಗಳು ನಿರ್ಮಾಣವಾಗಿವೆ. ಎಷ್ಟು ಕಟ್ಟಡಗಳು ನಿರ್ಮಾಣ ಹಂತದಲ್ಲಿದೆ ಹಾಗೂ ಯಾವ ಯಾವ ಹಂತದಲ್ಲಿದೆ (ವಿವರಗಳನ್ನು ನೀಡುವುದು)?

3. ಈ ಶಾಲೆಗಳಿಗೆ ಉಪಾಧ್ಯಾಯರು, ಇತರೇ ಸಿಬ್ಬಂದಿ ವರ್ಗದವರ ನೇಮಕಾತಿ ಮಾಡಲಾಗಿದೆಯೇ: ಮಾಡದಿದ್ದಲ್ಲಿ, ಯಾವಾಗಿನಿಂದ ನೇಮಕಾತಿ ಮಾಡಿಕೊಳ್ಳಲಾಗುವುದು (ವಿವರಗಳನ್ನು ನೀಡುವುದು)? ಉತ್ತರಿಸುವವರು

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

1.	1 ರಿಂದ 4ನೇ ತರಗತಿಯವರೆಗಿನ ವಸತಿ ಶಾಲೆಗಳು	-	90
2.	ಮೊರಾರ್ಜಿ ದೇಸಾಯಿ/ನವೋದಯ ಮಾದರಿ ವಸತಿ ಶಾಲೆಗಳು	-	77
3.	ಪರಿಶಿಷ್ಟ ವರ್ಗದ ಶಾಲೆಗಳು	-	3
			170

ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಒಟ್ಟು - 59

2.	1. ವಸತಿ ಸಾಲೆ ಕಟ್ಟಡ	-	1
	2. 1 ರಿಂದ 4ನೇ ತರಗತಿಯವರೆಗಿನ ವಸತಿ ಶಾಲಾ ಕಟ್ಟಡಗಳು	-	58
			59

ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

3. ಇದುವರೆವಿಗೂ ವಸತಿ ಶಾಲೆಗಳಿಗೆ ಸಂಬಂಧಪಟ್ಟಂತೆ ಉಪಾಧ್ಯಾಯರು ಇತರೇ ಸಿಬ್ಬಂದಿ ವರ್ಗದ ಒಟ್ಟು 1026 ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ.

ಉಳಿದ 1062 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾರಿಯಲ್ಲಿದ್ದು, ಶೀಘ್ರದಲ್ಲಿಯೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಅನುಬಂಧ - 1

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪಟ್ಟಿ

ಜಿಲ್ಲೆ	ತಾಲ್ಲೂಕು	ಕ್ರ.ಸಂ.	ಊರು
ಬಾಗಲಕೋಟೆ	ಬಾಗಲಕೋಟೆ	1	ಮುಚಖಂಡಿ
	ಬಾಗಲಕೋಟೆ	2	ಶಿರೂರು
	ಜಮಖಂಡಿ	3	ಹಿಪ್ಪರಗಿ
	ಮುಧೋಳ್	4	ಲೋಕಾಪುರ
ಬೆಂಗಳೂರು (ಗ್ರಾ)	ಕನಕಪುರ	5	ದೊಡ್ಡಮರಳವಾಡಿ
	ಹೊಸಕೋಟೆ	6	ಸೂಲಿಬೆಲೆ
ಬೆಂಗಳೂರು (ನ)	ಆನೇಕಲ್	7	ಯಮರೆ
ಬೆಳಗಾವಿ	ಅಥಣಿ	8	ಮುರಗುಂಡಿ
	ಹುಕ್ಕೇರಿ	9	ಸಂಕೇಶ್ವರ (ನಿಡಸೋಸಿ)
	ಬೆಳಗಾವಿ	10	ಬೆಳಗಾವಿ
	ಸೌದತ್ತಿ	11	ಯಲ್ಲಮ್ಮನಗುಡ್ಡ
ಬಳ್ಳಾರಿ	ಹಗರಿಬೊಮ್ಮನಹಳ್ಳಿ	12	ವಲ್ಲಭಾಪುರ
	ಹೊಸಪೇಟೆ	13	ತಿಮ್ಮಲಾಪುರ
	ಬಳ್ಳಾರಿ	14	ಬಳ್ಳಾರಿ
ಬೀದರ್	ಔರಾದ್	15	ಸಂತಪುರ
	ಬೀದರ್	16	ಕಾಮಠಾಣ
	ಬೀದರ್	17	ಬಗದಲ್
ಬಿಜಾಪುರ	ಇಂಡಿ	18	ಮರಗೂರು
	ಮುದ್ದೇಬಿಹಾಳ	19	ನಲತ್ತವಾಡ
ಚಾಮರಾಜನಗರ	ಗುಂಡ್ಲುಪೇಟೆ	20	ಯಡವನಹಳ್ಳಿ

ಜಿಲ್ಲೆ	ತಾಲ್ಲೂಕು	ಕ್ರ.ಸಂ.	ಊರು
ಕೊಳ್ಳೇಗಾಲ	21	ಹನೂರು	
ಚಿಕ್ಕಮಗಳೂರು	ಕಡೂರು	22	ಕಾಮನ ಕೆರೆ
	ಕೊಪ್ಪ	23	ಕೊಪ್ಪ
	ಕಡೂರು	24	ಕಡೂರು (ಕುಪ್ಪಾಳು)
ಚಿತ್ರದುರ್ಗ	ಹಿರಿಯೂರು	25	ವಿ.ವಿ. ಪುರ
ದಾವಣಗೆರೆ	ಚೆನ್ನಗಿರಿ	26	ಕಾರಿಗನೂರು
	ಹರಪನಹಳ್ಳಿ	27	ಹಲುವಾಗಿಲು
	ಹರಿಹರ	28	ನಂದಿಗುಡಿ
	ಹರಿಹರ	29	ದೇವರಬೆಳಕೆರೆ
ದಕ್ಷಿಣ ಕನ್ನಡ	ಮಂಗಳೂರು	30	ಕಲ್ಲುಬೆಟ್ಟ
	ಬೆಳ್ತಂಗಡಿ	31	ಮಚ್ಚಿನ
ಧಾರವಾಡ	ಧಾರವಾಡ	32	ಹೆಬ್ಬಳ್ಳಿ
	ಹುಬ್ಬಳ್ಳಿ	33	ಹುಬ್ಬಳ್ಳಿ
ಗದಗ	ಗದಗ	34	ಮುಳಗುಂದ
	ರೋಣ	35	ಕಾಲಕಾಲೇಶ್ವರ
	ಶಿರಹಟ್ಟಿ	36	ಲಕ್ಷ್ಮೇಶ್ವರ
ಗುಲ್ಬರ್ಗ	ಅಫಜಲ ಪುರ	37	ಅರ್ಜುನಗಿ
	ಶಹಾಪುರ	38	ಶಹಾಪುರ
	ಯಾದಗಿರಿ	39	ಲಿಂಗೇರಿ ಸ್ಟೇಷನ್
	ಅಫಜಲ್ ಪುರ	40	ಕೂಗನೂರು
	ಅಳಂದ	41	ತಡಕಲ್
ಹಾಸನ	ಹಾಸನ	42	ದುದ್ದ
	ಚೆನ್ನರಾಯಪಟ್ಟಣ	43	ಗೊರಮಾರನಹಳ್ಳಿ
	ಹೊಳೆನರಸೀಪುರ	44	ಹರಿಹರಪುರ

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪಟ್ಟಿ

ಜಿಲ್ಲೆ	ತಾಲ್ಲೂಕು	ಕ್ರ.ಸಂ.	ಊರು
ಹಾವೇರಿ	ಹಾನಗಲ್	45	ಹಳ್ಳಿಬೈಲು
	ಸವಣೂರು	46	ಸವಣೂರು
ಕೋಲಾರ	ಕೆಜಿಎಫ್	47	ಆಂಡರ್‌ಸನ್ ಪೇಟೆ
	ಚಿಂತಾಮಣಿ	48	ಗಡಿಗಮಾರಪಲ್ಲಿ
	ಶ್ರೀನಿವಾಸಪುರ	49	ಸೋಮಯಾಜಪಲ್ಲಿ
ಕೊಪ್ಪಳ	ಗಂಗಾವತಿ	50	ಸಿದ್ದಾಪುರ
ಮಂಡ್ಯ	ಮಳವಳ್ಳಿ	51	ಕಿರುಗಾವಲು
	ಮಳವಳ್ಳಿ	52	ಬಾಚಹಳ್ಳಿ
	ಮಂಡ್ಯ	53	ತಂಗಳಗೆರೆ
	ನಾಗಮಂಗಲ	54	ಕೋಟೆಬೆಟ್ಟ
ಮೈಸೂರು	ನಂಜನಗೂಡು	55	ಎಸ್. ಹೊಸಕೋಟೆ
	ಮೈಸೂರು	56	ದೊಡ್ಡಹುಂಡಿ
ರಾಯಚೂರು	ಲಿಂಗಸಗೂರು	57	ಅಡವಿಭಾವಿ
	ದೇವದುರ್ಗ	58	ಜಾಲಹಳ್ಳಿ
ಶಿವಮೊಗ್ಗ	ಶಿಕಾರಿಪುರ	59	ಶಿರಾಳಕೊಪ್ಪ
	ಭದ್ರಾವತಿ	60	ಅನವೇರಿ
ಶಿವಮೊಗ್ಗ	ಶಿವಮೊಗ್ಗ	61	ಶಿವಮೊಗ್ಗ
ತುಮಕೂರು	ಮಧುಗಿರಿ	62	ಮೈದನಹಳ್ಳಿ
ಉಡುಪಿ	ಉಡುಪಿ	63	ಬ್ರಹ್ಮಾವರ
ಉತ್ತರ ಕನ್ನಡ	ಮುಂಡುಗೋಡು	64	ಮುಂಡುಗೋಡು
	ಯಲ್ಲಾಪುರ	65	ಮಾಗೋಡುಫಾಲ್ಸ್
ಚಿಕ್ಕಮಗಳೂರು	ಮೂಡಿಗೆರೆ	66	ಬಣಕಲ್
ಕೊಡಗು	ವಿರಾಜಪೇಟೆ	67	ತಿತಿಮತಿ
ಬೆಳಗಾವಿ	ಗೋಕಾಕ	68	ತವಗ

ನವೋದಯ ಮಾದರಿ ವಸತಿ ಶಾಲೆಗಳ ಪಟ್ಟಿ

ಬೆಂಗಳೂರು (ಗ್ರಾ)	ಚೆನ್ನಪಟ್ಟಣ	1	ಚನ್ನಪಟ್ಟಣ
ಬೆಳಗಾವಿ	ಬೈಲಹೊಂಗಲ	2	ಬೈಲಹೊಂಗಲ
ದಕ್ಷಿಣ ಕನ್ನಡ	ಬೆಳ್ತಂಗಡಿ	3	ಮುಂಡಾಜೆ
ರಾಯಚೂರು	ರಾಯಚೂರು	4	ರಾಯಚೂರು
ಬಾಗಲಕೋಟೆ	ಮುಧೋಳ್	5	ಮುಧೋಳ್
ಬೆಂಗಳೂರು (ನ)	ಬೆಂಗಳೂರು (ಉ)	6	ಅಡಕಿಮಾರನಹಳ್ಳಿ
ಬೆಳಗಾವಿ	ಹುಕ್ಕೇರಿ	7	ಹಿಡಕಲ್ ಡ್ಯಾಂ
ಬಳ್ಳಾರಿ	ಹಡಗಲಿ	8	ಮೊದಲಘಟ್ಟ
ಬಿಜಾಪುರ	ಇಂಡಿ	9	ಹೊರ್ತಿ
ಗುಲ್ಬರ್ಗಾ	ಜೇವರ್ಗಿ	10	ಜೇವರ್ಗಿ
ಗುಲ್ಬರ್ಗ	ಸೇಡಂ	11	ಮಳಖೇಡ
ಮಂಡ್ಯ	ಶ್ರೀರಂಗಪಟ್ಟಣ	12	ಶ್ರೀರಂಗಪಟ್ಟಣ

1 ರಿಂದ 4ನೇ ತರಗತಿಯವರೆಗಿನ ಪರಿಶಿಷ್ಟ ಜಾತಿಯ ವಸತಿ ಶಾಲೆಗಳು

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ವಸತಿ ಶಾಲೆಯ ಸ್ಥಳ
1.	ಬೆಂಗಳೂರು ನಗರ	ಬೆಂಗಳೂರು (ನಗರ)	1. ದೊಡ್ಡ ಕನ್ನಹಳ್ಳಿ
			2. ಬಾಗಲೂರ್ ಲೇಔಟ್
2.	ಬೆಂಗಳೂರು ಗ್ರಾ.	ದೇವನಹಳ್ಳಿ	3. ದೇವನಹಳ್ಳಿ
		ಹೊಸಕೋಟೆ	4. ಹೊಸಕೋಟೆ
3.	ಶಿವಮೊಗ್ಗ	ಶಿಕಾರಿಪುರ	5. ಮಳವಳ್ಳಿ ತಾಂಡ
			6. ಮಂಜಿಕೊಪ್ಪ
			7. ಚನ್ನಗಿರಿ
4.	ಕೋಲಾರ	ಕೋಲಾರ	8. ಕೋಲಾರ ಟಾನ್
			9. ಬಂಗಾರುಪೇಟೆ
			10. ಗೌರಿಬಿದನೂರು

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ವಸತಿ ಶಾಲೆಯ ಸ್ಥಳ
5.	ತುಮಕೂರು	ತುಮಕೂರು	11. ತುಮಕೂರು ಟೌನ್
			12. ಪಾವಗಡ
6.	ಚಿತ್ರದುರ್ಗ	ಚಿತ್ರದುರ್ಗ	13. ಚಿತ್ರದುರ್ಗ ಟೌನ್
			14. ಹಿರಿಯೂರು
			15. ಭರಮಸಾಗರ
7.	ಮೈಸೂರು	ಮೈಸೂರು ನಗರ	16. ಬೊಂಬುಬಜಾರ್
			17. ಗಾಂಧಿನಗರ ಅಶುಚಿ
			18. ಟಿ. ನರಸೀಪುರ
8.	ಮಂಡ್ಯ	ಮಳವಳ್ಳಿ	19. ಮಳವಳ್ಳಿ
9.	ದಕ್ಷಿಣ ಕನ್ನಡ	ಬಂಟ್ವಾಳ	20. ಬಂಟ್ವಾಳ
10.	ಹಾಸನ	ಹಾಸನ	21. ಕಾರ್ಲೆ
		ಬೇಲೂರು ಚನ್ನರಾಯಪಟ್ಟಣ	22. ನರಸೀಪುರ ಬೋವಿ ಕಾಲೋನಿ
			23. ಸಂತೇನಹಳ್ಳಿ
			24. ಹೊಳೇನರಸೀಪುರ
11.	ಚಿಕ್ಕಮಗಳೂರು	ತರೀಕೆರೆ	25. ಮಲೆಚೆನ್ನಹಳ್ಳಿ
		- ಕಡೂರು	26. ಕಡೂರು
12.	ಕೊಡಗು	ಮಡಿಕೇರಿ	27. ಕಾರ್ಜಬೆ
13.	ಬೆಳಗಾವಿ	ಬೆಳಗಾವಿ	28. ಬೆಳಗಾವಿನಗರ
		--	29. ಬಿದನೂರು
		ರಾಯಬಾಗ್	30. ಕುಡಚಿ
			31. ಚಿಕ್ಕೋಡಿ
14.	ವಿಜಾಪುರ	ವಿಜಾಪುರ	32. ವಿಜಾಪುರ ಟೌನ್
			33. "
			34. ಚಡಚಣ

ಕ್ರಮ ಜಿಲ್ಲೆ ಸಂಖ್ಯೆ	ತಾಲ್ಲೂಕು	ವಸತಿ ಶಾಲೆಯ ಸ್ಥಳ
		35. ಡಂಜಿಗೆ
		36. ಕನ್ನಾಳತಾಂಡ
	ಮುದ್ದೇಬಿಹಾಳ	37. ಮುದ್ದೇಬಿಹಾಳ
	ಬೀಳಗಿ	38. ಕುಂಡರಗಿ
	ಮುದೋಳ್	39. ಮುದೋಳ್
	ಬಸವನಬಾಗೇವಾಡಿ	40. ಕುದುರೆಸಾಲ್ವಾಡಗಿ
	ಬಾಗಲಕೋಟೆ	41. ಮುಚಖಂಡಿ
15. ಧಾರವಾಡ	ಧಾರವಾಡ	42. ಧಾರವಾಡನಗರ
	ಶಿರಹಟ್ಟಿ	43 ಶಿಗ್ಲಿ
	ರಾಣೆಬೆನ್ನೂರು	44 ರಾಣೆಬೆನ್ನೂರು
		45. ನೂಕಾಪುರ
	ಹಿರೇಕೆರೂರ್	46. ಹಿರೇಕೆರೂರ್
	ಬ್ಯಾಡಗಿ	47 ಬ್ಯಾಡಗಿ
	ರೋಣ	48 ಗಜೇಂದ್ರಗಡ
	ಶಿಗ್ಗಾಂವ	49. ಶಿಗ್ಗಾಂವ್
	ಹಾನಗಲ್	50. ಹಾನಗಲ್
	ಹಾವೇರಿ	51. ಹಾವೇರಿ
16. ಉತ್ತರ ಕನ್ನಡ	ಸಿದ್ದಾಪುರ	52. ಸಿದ್ದಾಪುರ
	ಹಳಿಯಾಳ್	53 ಹಳಿಯಾಳ್
	ಸಿರ್ಸಿ	54 ಸಿರ್ಸಿ
17. ಗುಲ್ಬರ್ಗಾ	ಗುಲ್ಬರ್ಗಾ	55. ಗುಲ್ಬರ್ಗಾ ನಗರ
		56. ಗುಲ್ಬರ್ಗಾ ನಗರ (ಅಶು)
		57. " ಕನ್ನಾಳ್‌ತಾಂಡ
	ಚಿತ್ತಾಪುರ	58. ಕುಳಗಿ
		59. ಬಂಕಪೂರ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ವಸತಿ ಶಾಲೆಯ ಸ್ಥಳ
			60. ವಡ್ಡರ ಕಾಲೋನಿ ಷಹಾಬಾದ್
		ಚಿಂಚೋ	61. ಚಿಂಚೋಲಿ
			62. ಚಾರತ್‌ನಗರ ತಾಂಡ
			63. ಪಾಲ್ತಾತಾಂಡ
		ಆಲಂದ	64. ಕೊರಹಳ್ಳಿತಾಂಡ
		ಯಾದಗಿರಿ	65. ಬೋರಬಂಡಾ
		"	66. ಆಲಿಪುರ
		ಸೇಡಾಂ	67. ಪೂಲ್ಕೆದ್ ಸ್ಟೇಷನ್
		ಷಹಾಪುರ	68. ಅರ್ಜುನಗಿ
			69. ಅಫಜಲಪುರ
18.	ರಾಯಚೂರು	ರಾಯಚೂರು	70. ರಾಯಚೂರು ಟೌನ್
		"	71. ಉದಯಗಲ್ ಖಾನಾಪುರ
		ಗಂಗಾವತಿ	72. ಆಡವಿಭಾವಿ
		"	73. ನವಲಿತಾಂಡ
		ಲಿಂಗಳೂಗೂರು	74. ಅಸಿಯಾ ತಾಂಡ
			75. ಮಾರಲದಿನ್ನೆ
			76. ಬಂಡೇಗುಡ್ಡ
			77. ದೇವದುರ್ಗ
19.	ಬಳ್ಳಾರಿ	ಬಳ್ಳಾರಿ	78. ಬಳ್ಳಾರಿನಗರ (ಅಶುಚಿ)
		ಕೂಡ್ಲಿಗಿ	79. ಕೊಡ್ಲಿಗಿ
		ಹರಪನಹಳ್ಳಿ	80. ಹರಪನಹಳ್ಳಿ
20.	ಬೀದರ್	ಬೀದರ್	31. ಸಾಂಗೋಲಿಗತಾಂಡ
		ಬಸವ ಕಲ್ಯಾಣ	82. ಎಕ್ಲೋಗತಾಂಡ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ವಸತಿ ಶಾಲೆಯ ಸ್ಥಳ
		"	83. ಕಲೆಕೋರತಾಂಡ
		"	84. ಅರ್ಕೋಡ್‌ತಾಂಡ
		"	85. ಬಸವಕಲ್ಯಾಣ
		"	86. ಚಿಕ್ಲಿತಾಂಡ
		ಔರಾದ್	87. ನಿರ್ಮನಹಳ್ಳಿ ತಾಂಡ
		ಬಾಲ್ಕಿ	88. ಹುಮ್ನಾಬಾದ್
21.	ಹಾಸನ	ಗಂಡಸಿ	89. ಗಂಡಸಿ
22.	ಗುಲ್ಬರ್ಗಾ	ಚಿಂಚೋಳಿ	90. ಗೋಪನಾಯ್ಕನ ತಾಂಡ

ಅನುಬಂಧ - 2

ಮೊರಾರ್ಜಿ ದೇಸಾಯಿ/ನವೋದಯ ಮಾದರಿ ವಸತಿ ಶಾಲೆಗಳ ಕಾಮಗಾರಿಯ ವಿವರಗಳು

1. ಮಂಡ್ಯ	ಮಳವಳ್ಳಿ	1. ಕಿರುಗಾವಲು	ಕಾಮಗಾರಿವ್ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ
	ಮಂಡ್ಯ	2. ತಂಗಳಗೆರೆ	ನೆಲಹಾಸು ಮತ್ತು ಗಿಲಾವು ಕೆಲಸ ನಡೆಯುತ್ತಿದೆ.	ಪ.ಜಾ
	ನಾಗಮಂಗಲ	3. ಕೋಟೆಬೆಟ್ಟ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.	ಪ.ಜಾ
	ಮಳವಳ್ಳಿ	4. ಚಾಚನಹಳ್ಳಿ	ತಳಪಾಯ ಕಾಮಗಾರಿ ನಡೆಯುತ್ತಿದೆ.	ಪ.ಜಾ
	ಶ್ರೀರಂಗಪಟ್ಟಣ	5. ಶ್ರೀರಂಗಪಟ್ಟಣ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಹಿಂ.ವ
2. ದಾವಣಗೆರೆ	ಚೆನ್ನಗಿರಿ	6. ಕಾರಿಗನೂರು	ಪರ್ಯಾಯ ನಿವೇಶನ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.	ಪ.ಜಾ
	ಹರಪನಹಳ್ಳಿ	7. ಹಲುವಾಗಿಲು	1ನೇ ಹಂತದ ಕಾಮಗಾರಿ ಮುಗಿದಿದ್ದು, 2ನೇ ಹಂತದ ತಳಪಾಯ	ಪ.ಜಾ
	ಹರಿಹರ	8. ನಂದಿಗುಡಿ	ಕಾಮಗಾರಿ ನಡೆಯುತ್ತಿದೆ.	ಪ.ಜಾ
		9. ದೇವರಬೆಳೆಕೆರೆ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಹಿಂ.ವ
3. ಬಳ್ಳಾರಿ	ಹಗರಿಬೊಮ್ಮನಹಳ್ಳಿ	10. ವಲ್ಲಭಾಪುರ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ
	ಹೊಸಪೇಟೆ	11. ತಿಮ್ಮಲಾಪುರ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ
		12. ಬಳ್ಳಾರಿ	ತಳಪಾಯ ಕಾಮಗಾರಿ ನಡೆಯುತ್ತಿದೆ	ಅ.ಸಂ
		13. ಮೊದಲಘಟ್ಟ	ಕಾಮಗಾರಿ ಪ್ರಾರಂಭಿಸಬೇಕಾಗಿದೆ.	ಹಿಂ.ವ

1	2	3	4	5	6	7
4.	ಬಾಗಲಕೋಟೆ	ಬಾಗಲಕೋಟೆ	14.	ಮುಚಖಂಡಿ	ಗೋಡೆ ಗಿಲಾವು ಮತ್ತು ಬಣ್ಣದ ಕೆಲಸ ನಡೆಯುತ್ತಿದೆ.	ಪ.ಜಾ
		ಬಾಗಲಕೋಟೆ	15.	ಶಿರೂರು	ಗೋಡೆ ಗಿಲಾವು ಮತ್ತು ಬಣ್ಣದ ಕೆಸ ನಡೆಯುತ್ತಿದೆ.	ಪ.ಜಾ
		ಜಮಖಂಡಿ	16.	ಹಿಪ್ಪರಗಿ	ಕಾಮಗಾರಿ ಕೆಲಸ ಪ್ರಾರಂಭಿಸಬೇಕಾಗಿದೆ.	ಪ.ಜಾ
		ಮುಧೋಳ್	17.	ಲೋಕಾಪುರ	ಕಾಮಗಾರಿ ಕೆಲಸ ಪ್ರಾರಂಭಿಸಬೇಕಾಗಿದೆ.	ಪ.ಜಾ
		ಮುಧೋಳ್	18.	ಮುಧೋಳ್	ತಳಪಾಯ ಕೆಲಸ ನಡೆಯುತ್ತಿದೆ.	ಹಿಂ.ವ
5.	ಬೆಂಗಳೂರು (ಗ್ರಾ)	ಕನಕಪುರ	19.	ದೊಡ್ಡಮರಳವಾಡಿ	ನೆಲಹಾಸು ಮತ್ತು ಗಿಲಾವು ಕೆಲಸ ನಡೆಯುತ್ತಿದೆ.	ಪ.ಜಾ
		ಹೊಸಕೋಟೆ	20	ಸೂಲಿಬೆಲೆ	ಪೂರ್ಣಗೊಳ್ಳುವ ಹಂತದಲ್ಲಿದೆ	ಹಿಂ.ವ
		ಚೆನ್ನಪಟ್ಟಣ	21.	ಚೆನ್ನಪಟ್ಟಣ	ಪರ್ಯಾಯ ನಿವೇಶನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ	ಹಿಂ.ವ
6.	ಬೆಂಗಳೂರು (ನ)	ಆನೇಕಲ್	22.	ಯಮರೆ	ನಿವೇಶನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.	ಪ.ಜಾ
		ಬೆಂಗಳೂರು (ಉ)	23.	ಅಡಕಿಮಾರನಹಳ್ಳಿ	ಛಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ	ಹಿಂ.ವ
7.	ಬಿಜಾಪುರ	ಇಂಡಿ	24.	ಮರಗೂರು	ಗೋಡೆ ಗಿಲಾವು ಕೆಲಸ ನಡೆಯುತ್ತಿದೆ.	ಪ.ಜಾ
		ಮುದ್ದೇಬಿಹಾಳ	25.	ನಲತ್ತವಾಡ	ಕಾಮಗಾರಿ ಪ್ರಾರಂಭಿಸಬೇಕಾಗಿದೆ	ಪ.ಜಾ
		ಇಂಡಿ	26.	ಹೊರ್ತಿ	ತಳಪಾಯ ಕಾಮಗಾರಿ ನಡೆಯುತ್ತಿದೆ.	ಹಿಂ.ವ
8.	ಬೆಳಗಾವಿ	ಅಥಣಿ	27.	ಮುರಗುಂಡಿ	ಛಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ	ಪ.ಜಾ
		ಬೈಲಹೊಂಗಲ	28.	ಬೈಲಹೊಂಗಲ	1ನೇ ಹಂತದ ಕಟ್ಟಡ ಮುಗಿದಿದ್ದು, 2ನೇ ಹಂತದ ಕಟ್ಟಡ ಪ್ರಾರಂಭಿಸಬೇಕಾಗಿದೆ.	ಪ.ಜಾ

1	2	3	4	5	6	7
		ಹುಕ್ಕೇರಿ	29.	ಸಂಕೇಶ್ವರ(ನಿಡಸೋಸಿ)	ಗೋಡೆ ಗಿಲಾವು ಕೆಲಸ ನಡೆಯುತ್ತಿದೆ.	ಪ.ಜಾ
		ಗೋಕಾಕ	30.	ತವಗ	ಗೋಡೆ ಗಿಲಾವು ಕೆಲಸ ನಡೆಯುತ್ತಿದೆ.	ಪ.ವ
		ಸೌದತ್ತಿ	31.	ಯಲ್ಲಮ್ಮನಗುಡ್ಡ	ತಳಪಾಯ ಕಾಮಗಾರಿ ನಡೆಯುತ್ತಿದೆ. (1ನೇ ಹಂತದ ಕಟ್ಟಡ (ಮುಗಿದಿದೆ.)	ಪ.ಜಾ
		ಬೆಳಗಾವಿ	32.	ಹುಲಿಕಟ್ಟೆ	ತಳಪಾಯ ಕೆಲಸ ನಡೆಯುತ್ತಿದೆ.	ಅ.ಸಂ.
		ಹುಕ್ಕೇರಿ	33.	ಹಿಡಕಲ್ ಡ್ಯಾಂ	ಕಾಮಗಾರಿ ಪ್ರಾರಂಭಿಸಬೇಕಾಗಿದೆ	ಹಿಂ.ವ
8.	ಬೀದರ್	ಔರಾದ್	34.	ಸಂತಪುರ	ಕಾಮಗಾರಿ ಪ್ರಾರಂಭಿಸಬೇಕಾಗಿದೆ	ಪ.ಜಾ
		ಬೀದರ್	35.	ಕಾಮಠಾಣ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ
		ಬೀದರ್	36.	ಬಗದಲ್	ಕಾಮಗಾರಿ ಪ್ರಾರಂಭಿಸಬೇಕಾಗಿದೆ	ಹಿಂ.ವ
10.	ಚಾಮರಾಜನಗರ	ಗುಂಡ್ಲು ಪೇಟೆ	37.	ಯಡಮನಹಳ್ಳಿ	ಪೂರ್ಣಗೊಳ್ಳುವ ಹಂತದಲ್ಲಿದೆ.	ಪ.ಜಾ
		ಕೊಳ್ಳೇಗಾಲ	38.	ಹನೂರು	ನಿವೇಶನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.	ಪ.ಜಾ
11.	ಚಿಕ್ಕಮಗಳೂರು	ಕಡೂರು	39.	ಕಾಮನ ಕೆರೆ	1ನೇ ಹಂತದ ಕಾಮಗಾರಿ ಮುಗಿದಿದ್ದು, 2ನೇ ಹಂತದ ತಳಪಾಯ ಕಾಮಗಾರಿ ನಡೆಯುತ್ತಿದೆ.	ಪ.ಜಾ
		ಮೂಡಿಗೆರೆ	40.	ಬಣಕಲ್	ಕಟ್ಟಡ ಕಾಮಗಾರಿ ಪ್ರಾರಂಭಿಸಬೇಕಾಗಿದೆ	ಪ.ವ
		ಕೊಪ್ಪ	41.	ಕೊಪ್ಪ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ
		ಕಡೂರು	42.	ಕಡೂರು (ಕುಪ್ಪಾಳು)	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಹಿಂ.ವ

1	2	3	4	5	6	7
12.	ಚಿತ್ರದುರ್ಗ	ಹಿರಿಯೂರು	43.	ವಿ.ವಿ. ಪುರ	1ನೇ ಹಂತದ ಕಾಮಗಾರಿ ಮುಗಿದಿದ್ದು, 2ನೇ ಹಂತದ ತಳಪಾಯ ಕಾಮಗಾರಿ ನಡೆಯುತ್ತಿದೆ.	ಪ.ಜಾ
13.	ದಕ್ಷಿಣ ಕನ್ನಡ	ಮಂಗಳೂರು	44.	ಕಲ್ಲುಬೆಟ್ಟ	ತಳಪಾಯ ಕಾಮಗಾರಿ ನಡೆಯುತ್ತಿದೆ.	ಪ.ಜಾ
		ಬೆಳ್ತಂಗಡಿ	45.	ಮುಂಡಾಜೆ	ಎಲ್ಲಾ ಕಾಮಗಾರಿ ಮುಗಿದಿದ್ದು, ವಿದ್ಯುತ್ ಸೌಲಭ್ಯ ಪಡೆಯಬೇಕಾಗಿದೆ.	ಪ.ಜಾ
		ಬೆಳ್ತಂಗಡಿ	46.	ಮಚ್ಚಿನ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಹಿಂ.ವ
14.	ಧಾರವಾಡ	ಧಾರವಾಡ	47.	ಹೆಬ್ಬಳ್ಳಿ	ಭಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ.	ಪ.ಜಾ
		ಹುಬ್ಬಳ್ಳಿ	48.	ಹುಬ್ಬಳ್ಳಿ	ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.	ಹಿಂ.ವ
15.	ಗದಗ	ಗದಗ	49.	ಮುಳಗುಂದ	ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು	ಪ.ಜಾ
		ರೋಣ	50.	ಕಾಲಕಾಲೇಶ್ವರ	ಜಮೀನು ದೊರೆಯದೆ ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ	ಪ.ಜಾ
		ಶಿರಹಟ್ಟಿ	51.	ಕಾಲ ಲಕ್ಷ್ಮೀ ೇಶ್ವರ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ
16.	ಹಾಸನ	ಹಾಸನ	52.	ದುದ್ದ	ಭಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ.	ಪ.ಜಾ
		ಚೆನ್ನರಾಯಪಟ್ಟಣ	53.	ಗೂರಮಾರನಹಳ್ಳಿ	ನೆಲಹಾಸು ಮತ್ತು ನೆಲಹಾಸಿನ ಕೆಲಸ ನಡೆಯುತ್ತಿದೆ.	ಹಿಂ.ವ
		ಹೊಳೆನರಸೀಪುರ	54.	ಹರಿಹರಪುರ		ಹಿಂ.ವ
17.	ಗುಲ್ಬರ್ಗ	ಅಫಜಲ ಪುರ	55.	ಅರ್ಜುನಗಿ	ಭಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ.	ಪ.ಜಾ
		ಶಹಾಪುರ	56.	ಶಹಾಪುರ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ

1	2	3	4	5	6	7
		ಯಾದಗಿರಿ	57.	ಲಿಂಗೇರಿ ಸ್ಟೇಷನ್	ಭಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ.	ಪ.ಜಾ
		ಅಫಜಲ್ ಪುರ	58.	ಕೂಗನೂರು	1ನೇ ಹಂತದ ಕಾಮಗಾರಿ ಮುಗಿದಿದ್ದು, 2ನೇ ಹಂತದ ಕಾಮಗಾರಿ ಪ್ರಾರಂಭಿಸಬೇಕಾಗಿದೆ.	ಹಿಂ.ವ
		ಆಳಂದ	59.	ತಡಕಲ್	ಕಾಮಗಾರಿ ಕೆಲಸ ಪ್ರಾರಂಭಿಸಬೇಕಾಗಿದೆ.	ಹಿಂ.ವ
		ಜೇವರ್ಗಿ	60.	ಜೇವರ್ಗಿ	ಕಾಮಗಾರಿ ಕೆಲಸ ಪ್ರಾರಂಭಿಸಬೇಕಾಗಿದೆ.	ಹಿಂ.ವ
		ಸೇಡಂ	61.	ಮಳಖೇಡ	ಗೋಡೆ ಗಿಲಾವು ಕೆಲಸ ನಡೆಯುತ್ತಿದೆ.	ಹಿಂ.ವ
18.	ಹಾವೇರಿ	ಹಾನಗಲ್	62.	ಹಳ್ಳಿಬೈಲು	2ನೇ ಹಂತದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.	ಪ.ಜಾ
		ಸವಣೂರು	63.	ಸವಣೂರು	ಭಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ	ಹಿಂ.ವ
19.	ಕೊಡಗು	ವಿರಾಜಪೇಟೆ	64.	ಬಾಳಗೋಡು(ತಿತಿಮತಿ)	ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.	ಪ.ವ
20.	ಕೋಲಾರ	ಕೆಜಿಎಫ್	65.	ಅಂಡರ್‌ಸನ್ ಪೇಟೆ	ಜಮೀನು ದೊರೆತಿಲ್ಲ	ಪ.ಜಾ
		ಚಿಂತಾಮಣಿ	66.	ಗಡಿಗವಾರಪಲ್ಲಿ	ಗಿಲಾವು ಕೆಲಸ ಮತ್ತು ಭಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ	ಪ.ಜಾ
		ಶ್ರೀನಿವಾಸಪುರ	67.	ಸೋಮಯಾಜಲಪಲ್ಲಿ	ಗಿಲಾವು ಕೆಲಸ ಮತ್ತು ಭಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ.	ಪ.ಜಾ
21.	ಕೊಪ್ಪಳ	ಗಂಗಾವತಿ	68.	ಸಿದ್ದಾಪುರ	ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.	ಪ.ಜಾ

1	2	3	4	5	6	7
22.	ಮೈಸೂರು	ನಂಜನಗೂಡು	69.	ಎಸ್. ಹೊಸಕೋಟೆ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಪ.ಜಾ
		ಮೈಸೂರು	70.	ದೊಡ್ಡಹುಂಡಿ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿ	ಹಿಂ.ವ
23.	ರಾಯಚೂರು	ಲಿಂಗಸಗೂರು	71.	ಅಡವಿಭಾವಿ	ಕಾಮಗಾರಿ ಅಪೂರ್ಣಗೊಂಡಿದ್ದು, ಪುನಾಃ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.	ಪ.ಜಾ
		ರಾಯಚೂರು	72.	ರಾಯಚೂರು	ಕಾಮಗಾರಿ ಮುಗಿದಿದೆ.	ಪ.ಜಾ
		ದೇವದುರ್ಗ	73.	ಜಾಲಹಳ್ಳಿ	ಛಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ.	ಹಿಂ.ವ
24.	ಶಿವಮೊಗ್ಗ	ಶಿಕಾರಿಪುರ	74.	ಶಿರಾಳಕೊಪ್ಪ	ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.	ಪ.ಜಾ
		ಶಿವಮೊಗ್ಗ	75.	ಮೇಲಿನ ಹನಸವಾಡಿ	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ	ಅ.ಸಂ.
		ಭದ್ರಾವತಿ	76.	ಅನವೇರಿ	ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.	ಹಿಂ.ವ
25.	ತುಮಕೂರು	ಮಧುಗಿರಿ	77.	ಮೈದನಹಳ್ಳಿ	1ನೇ ಹಂತ ಕಾಮಗಾರಿ ಮುಗಿಯುವ ಹಂತದಲ್ಲಿದೆ.	ಪ.ಜಾ
26.	ಉಡುಪಿ	ಉಡುಪಿ	78.	ಬ್ರಹ್ಮಾವರ	ಪರ್ಯಾಯ ನಿವೇಶನ ದೊರೆತಿಲ್ಲ	ಪ.ಜಾ
27.	ಉತ್ತರ ಕನ್ನಡ	ಮುಂಡಗೋಡು	79.	ಮುಂಡಗೋಡು	ಗೋಡೆ ಗಿಲಾವು ಕೆಲಸ ನಡೆಯುತ್ತಿದೆ.	ಪ.ಜಾ
		ಯಲ್ಲಾಪುರ	80.	ಮಾಗೋಡು ಫಾಲ್ಸ್	ಛಾವಣಿ ನಿರ್ಮಾಣದ ಕೆಲಸ ನಡೆಯುತ್ತಿದೆ.	ಹಿಂ.ವ

1 ರಿಂದ 4ನೇ ತರಗತಿಯವರೆಗಿನ ಪರಿಶಿಷ್ಟ ಜಾತಿಯ ವಸತಿ ಶಾಲೆಗಳು

ನಿರ್ಮಾಣ ಹಂತದ ವಸತಿ ಶಾಲೆಗಳ ಹೆಸರು ಮತ್ತು ಸ್ಥಳ	ಕಾಮಗಾರಿ ಹಂತ
1. ವಸತಿ ಶಾಲೆ, ಮಳವಳ್ಳಿ ತಾಂಡ ಶಿಕಾರಿ ಪುರ ತಾ: ಶಿವಮೊಗ್ಗ ಜಿಲ್ಲೆ.	ಮುಕ್ತಾಯವಾಗಿದೆ ಇಲಾಖೆಯ ವಶಕ್ಕೆ ನೀಡಬೇಕಿದೆ.
2. ವಸತಿ ಶಾಲೆ, ಪೇಟೆ ಚಾಮನಹಳ್ಳಿ, ಕೋಲಾರ ಟೌನ್	ಮುಕ್ತಾಯವಾಗಿದೆ - " -
3. ವಸತಿ ಶಾಲೆ, ಭರಮಸಾಗರ, ಚಿತ್ರದುರ್ಗ ತಾ: ಜಿಲ್ಲೆ	ಮುಕ್ತಾಯವಾಗಿದೆ - " -
4. ವಸತಿಶಾಲೆ, ಹಿರಿಯೂರು ಟೌನ್, ಚಿತ್ರದುರ್ಗ ಜಿ: - " -	ಮುಕ್ತಾಯವಾಗಿದೆ
5. ವಸತಿಶಾಲೆ, ಶಿಗ್ಲಿ, ಶಿರಹಟ್ಟಿ ತಾ: ಗದಗ್ ಜಿಲ್ಲೆ	ಮುಕ್ತಾಯದ ಕೆಲಸಗಳು ಪ್ರಗತಿಯಲ್ಲಿದೆ.
6. ವಸತಿಶಾಲೆ ಹಂಜಗಿ, ಇಂಡಿ ತಾ: ಬಿಜಾಪುರ ಜಿಲ್ಲೆ	ಪ್ಲಾಸ್ಟರಿಂಗ್ ಕೆಲಸಪ್ರಗತಿಯಲ್ಲಿದೆ
7. ವಸತಿಶಾಲೆ. ಮಲ್ಲೇಚನ್ನೇನಹಳ್ಳಿ, ತರಿಕೆರೆ ತಾ: ಚಿಕ್ಕಮಗಳೂರು ಜಿಲ್ಲೆ.	ಪ್ಲಾಸ್ಟರಿಂಗ್ ಕೆಲಸ - " -
8. ವಸತಿ ಶಾಲೆ, ಮಳವಳ್ಳಿ ಟೌನ್, ಮಂಡ್ಯ ಜಿಲ್ಲೆ	ಲಿಂಟಲ್ ಲೆವೆಲ್
9. ವಸತಿ ಶಾಲೆ ಬಾಗಲಕೋಟೆ ಟಾನ್, ಬಾಗಲಕೋಟೆ ಜಿಲ್ಲೆ	ಪೌಂಡೇಶನ್ ಕೆಲಸ ಪ್ರಗತಿಯಲ್ಲಿದೆ

ಅನುಬಂಧ - 3

1. (ಅ) 1 ರಿಂದ 4ನೇ ತರಗತಿಯ ವಸತಿ ಶಾಲಾ ಶಿಕ್ಷಕರು	260	182	78
(ಆ) ಗ್ರೂಪ್ - ಡಿ	270	107	163

2. (ಅ) ನವೋದಯ ಮಾದರಿ/ ಮೊರಾರ್ಜಿ ದೇಸಾಯಿ ವಸತಿ ಶಾಲಾ ಶಿಕ್ಷಕರು	857	184 ನಿಯೋಜನೆ 312 ಗೌರವಧನ	361
(ಆ) ಪ್ರಥಮದರ್ಜೆ ಸಹಾಯಕರು/ ದ್ವಿತೀಯ ದರ್ಜೆ ಸಹಾಯಕರು ಬೆರಳಚ್ಚುಗಾರರು	162	33	129
(ಇ) ವಾರ್ಡನ್	75	34	41
(ಈ) ಗ್ರೂಪ್ - ಡಿ	404	174	290
	2088	1026	1062

ವಸತಿ ಶಾಲೆಯ ಶಿಕ್ಷಕರನ್ನು ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಭರ್ತಿ ಮಾಡಬೇಕಾಗಿದ್ದು, ಶಿಕ್ಷಣ ಇಲಾಖೆಯು ಶಿಕ್ಷಕರನ್ನು ನಿಯೋಜಿಸದೇ ಇರುವುದರಿಂದ, ಗೌರವಧನದ ಮೇಲೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದವರು ಗೌರವಧನದ ಮೇಲೆ ನೇಮಕಾತಿ ಮಾಡುತ್ತಿದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ.

ಪ್ರಥಮ ದರ್ಜೆ ಸಹಾಯಕರು ದ್ವಿತೀಯ ದರ್ಜೆ ಸಹಾಯಕರು ಹಾಗೂ ಬೆರಳಚ್ಚುಗಾರರನ್ನು ಕರ್ನಾಟಕ ಲೋಕಸೇವಾ ಆಯೋಗ ಮತ್ತು ಬೆರಳಚ್ಚು ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಆಯ್ಕೆ ಪಟ್ಟಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಾರ್ಡನ್ ಹುದ್ದೆಗಳನ್ನು ಸಮಾಜ ಕಲ್ಯಾಣ ಇಲಾಖೆಯು ನೇರ ನೇಮಕಾತಿ ಮೂಲಕ ಆಯ್ಕೆ ಮಾಡುತ್ತಿದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ.

ಗ್ರೂಪ್ - ಡಿ ಹುದ್ದೆಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮಿತಿಗೆ ಅಧಿಕಾರವಿದ್ದು, ಈ ಸಮಿತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡುವಂತೆ ನಿರ್ದೇಶನ ನೀಡಲಾಗಿದ್ದು, ಪ್ರಕ್ರಿಯೆ ಜಾರಿಯಲ್ಲಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರವನ್ನು ನೋಡಿದಾಗ ಎರಡು ಉಪಪ್ರಶ್ನೆಗಳು ಉದ್ಭವವಾಗಿವೆ ಅದನ್ನು ಕೇಳಬಯಸುತ್ತೇನೆ. ಮೊದಲನೆಯದಾಗಿ, ರಾಜ್ಯದಲ್ಲಿ ಒಟ್ಟು 170 ಮುರಾರ್ಜಿ ದೇಸಾಯಿ ವಸತಿ ಶಾಲೆಗಳಿದ್ದು 50 ಶಾಲೆಗಳಿಗೆ ಮಾತ್ರ ಇದುವರೆಗೆ ಕಟ್ಟಡಗಳಿವೆ. ಇವೆಲ್ಲಾ ವಸತಿ ಶಾಲೆಗಳಾಗಿರುವುದರಿಂದ ಈ ಕಟ್ಟಡಗಳನ್ನು ಪೂರ್ತಿಗೊಳಿಸಲು ಇರುವ ಅಡಚಣೆಗಳೇನು? ಇದಕ್ಕೆ ಕೇಂದ್ರ ಸರ್ಕಾರದ ನೆರವು ಸಿಗುವುದರಿಂದ, ಅದನ್ನು ಸಹ ತೆಗೆದುಕೊಂಡು ಒಂದು ಕಾಲಮಿತಿ ಹಾಕಿಕೊಂಡು ಎರಡು ವರ್ಷಗಳ ಒಳಗಡೆ ಈ ಎಲ್ಲಾ ಕಟ್ಟಡಗಳನ್ನು ಪೂರೈಸಲು ಸರ್ಕಾರಕ್ಕೆ ಸಾಧ್ಯವೇ? ಇನ್ನು ಎರಡನೆಯದಾಗಿ, ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಆಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ ಈ ಕೆಲಸವನ್ನು 6 ತಿಂಗಳೊಳಗೆ ಮುಗಿಸಲು ಸಾಧ್ಯವೇ? ಈ

ಪ್ರಶ್ನೆಯನ್ನು ಕೇಳಲು ಮುಖ್ಯವಾದ ಕಾರಣವೇನೆಂದರೆ, ಈ ಮುರಾರ್ಜಿದೇಸಾಯಿ ವಸತಿ ಶಾಲೆಗಳಿಗೆ ಸಾಮಾನ್ಯವಾಗಿ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ, ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ವರ್ಗದ ಬಡಮಕ್ಕಳು ಹೆಚ್ಚಾಗಿ ಬರುತ್ತಾರೆ. ಅವರು ಸಧ್ಯದಲ್ಲಿ ಬಾಡಿಗೆ ಮನೆಗಳಿದ್ದಾರೆ. ಬಹಳ ದುಸ್ಥಿತಿಯಲ್ಲಿದ್ದಾರೆ. ಈ ಸರ್ಕಾರ ಸ್ವಲ್ಪಮಟ್ಟಿಗೆ ಒಂದು ಒಳ್ಳೆಯ ಕೆಲಸವನ್ನು ಮಾಡಿದೆ. ಕೆಲವು ಮುರಾರ್ಜಿದೇಸಾಯಿ ವಸತಿ ಶಾಲೆಗಳಿಗೆ ಎರಡು, ಎರಡೂವರೆ ಕೋಟಿ ರೂಪಾಯಿಗಳಲ್ಲಿ ಕಟ್ಟಡಗಳನ್ನು ಕಟ್ಟುವ ಕೆಲಸಗಳಾಗಿವೆ. ಕೆಲವು ಕಡೆ ಗುಣಮಟ್ಟದ ಕಟ್ಟಡಗಳನ್ನು ಕಟ್ಟಿರುವುದನ್ನು ನಾನು ಒಪ್ಪುತ್ತೇನೆ. ಇವತ್ತು ಈ ವಸತಿ ಒಂದು ಶಾಲೆಗಳು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿವೆ ಆದರಲ್ಲಿ ಟೀಚರ್ಸ್ ಇಲ್ಲದಿರುವುದು ಒಂದು. ಟೀಚರ್‌ಗಳೇ ವಾರ್ಡ್‌ನ್ ಕುಕ್ ಕುಕ್‌ಗಳೇ ಅನೇಕ ಕಡೆ ಟೀಚರ್‌ಗಳಾಗಿದ್ದಾರೆ. ಈ ದುಸ್ಥಿತಿಯನ್ನು ಸರಿ ಮಾಡುವುದಕ್ಕೆ ಮಾನ್ಯ ಕಾಗೋಡು ತಿಮ್ಮಪ್ಪನವರು, ಸಾಮಾಜಿಕ ಹಿನ್ನೆಲೆ ಇರುವವರು ಸರಿ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ ಆದರೆ ಏತಕ್ಕೋ ಅವರು ಸರಿ ಮಾಡಲಿಲ್ಲ ಹಾಸ್ಟೆಲ್‌ಗಳ ಮೇಲೆ ಲೋಕಾಯುಕ್ತರ ದಾಳಿಗಳಾದವು ಬಹುಶಃ ಅದೇ ಕಾರಣಕ್ಕೆ ಅವರ ಖಾತೆ ಬದಲಾವಣೆಯಾಯಿತೆ ಏನೋ ಅದು ನನಗೆ ಗೊತ್ತಿಲ್ಲ. ಈ ಸಮಾಜ ಕಲ್ಯಾಣ ಖಾತೆಯನ್ನು ಹೊಸಬರಿಗೆ ಕೊಟ್ಟಿದ್ದಾರೆ. ಇದನ್ನು ಒಂದು ಕಾಲಮಿತಿಯಲ್ಲಿ ಜಾರಿ ಮಾಡಲು ಸಾಧ್ಯವೇ? ಎಂದು ಈ ಎರಡು ಉಪ ಪ್ರಶ್ನೆಗಳನ್ನು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಎರಡು ಪ್ರಮುಖ ಪ್ರಶ್ನೆಗಳನ್ನು ಕೇಳಿದ್ದಾರೆ. ಕಟ್ಟಡಗಳಿಲ್ಲದೆ ಬಾಡಿಗೆ ಮನೆಯಲ್ಲಿದ್ದು ಈ ಮಕ್ಕಳು ವಸತಿ ಶಾಲೆಗಳಲ್ಲಿ ಓದುತ್ತಿರುವ ವಿಚಾರದ ಬಗ್ಗೆ ಬಹಳ ಕಳಕಳಿಯನ್ನು ವ್ಯಕ್ತ ಮಾಡಿದ್ದಾರೆ ಈ ಬಗ್ಗೆ ಒಟ್ಟಾರೆ ಒಂದು ಸಮಗ್ರ ಯೋಜನೆಯನ್ನು ಈ ವರ್ಷ ನಾವು ಮಾಡುತ್ತಿದ್ದೇವೆ. ಹೇಗಾದರೂ ಮಾಡಿ ಇನ್ನೆರಡು ವರ್ಷಗಳಲ್ಲಿ ಎಲ್ಲಾ ಶಾಲೆಗಳಿಗೆ ಹುಡ್ಕೊ ಸಹಾಯ ಪಡೆದುಕೊಂಡು ಸ್ವಂತ ಕಟ್ಟಡಗಳನ್ನು ಮಾಡಬೇಕೆಂದು ಒಂದು ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಆ ಕಾರ್ಯಕ್ರಮವನ್ನು ಸದಸ್ಯದಲ್ಲೇ ಅಧಿವೇಶನ ಮುಗಿದ ನಂತರ ತಮ್ಮ ಗಮನಕ್ಕೂ ತರಬಹುದು, ಆದರೆ ಕ್ರಮ ತೆಗೆದುಕೊಳ್ಳಲು ಮಾಡಬೇಕಾದ ಮೂಲಭೂತ ಏರ್ಪಾಡುಗಳನ್ನೆಲ್ಲಾ ಈಗಾಗಲೇ ಮಾಡಲಾಗಿದೆ. ವಸತಿ ಶಾಲೆಗಳಿಗೆ ಉಪಾಧ್ಯಾಯರು, ವಾರ್ಡ್‌ನ್ ಕುಕ್ಸ್ ಹಾಗೂ ಸ್ವಾಫ್ಸ್ ನೇಮಕ ಮಾಡುವ ಬಗ್ಗೆ ಕೇಳಿದ್ದಾರೆ. ಈಗಾಗಲೇ 260 ಟೀಚರ್ಸ್ ಹುದ್ದೆಗಳು ಏನಿತ್ತು ಆದರಲ್ಲಿ 182 ಹುದ್ದೆಗಳನ್ನು ಈಗಾಗಲೇ ನಾವು ಭರ್ತಿ ಮಾಡಿದ್ದೇವೆ. ಇನ್ನು ಉಳಿದ ಹುದ್ದೆಗಳನ್ನು ಎರವಲು ಸೇವೆ ಆಧಾರದ ಮೇಲೆ ಕೊಡಲು ಶಿಕ್ಷಣ ಇಲಾಖೆಯನ್ನು ಕೇಳಿದ್ದೇವೆ. 270 'ಡಿ' ಗ್ರೂಪ್ ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 107 ಹುದ್ದೆಗಳನ್ನು ಈಗಾಗಲೇ ನಾವು ಭರ್ತಿ ಮಾಡಿದ್ದೇವೆ. ಇನ್ನು ಬಾಕಿ ಉಳಿದಿರುವ ಹುದ್ದೆಗಳನ್ನು ತುಂಬಲು ಆಯಾ ಜಿಲ್ಲಾಧಿಕಾರಿಗಳಿಗೆ ನಾವು ಜವಾಬ್ದಾರಿಯನ್ನು ಕೊಟ್ಟಿರುವುದರಿಂದ ಅವರು ಅದನ್ನು ತುಂಬಿ ಆಯಾ ಶಾಲೆಗಳಿಗೆ ಕೊಡುವ ಆದೇಶ ಈಗಾಗಲೇ ಹೋಗಿದೆ ಅವರು ಈ ಕೆಲಸವನ್ನು ಕೂಡಲೇ ಮಾಡಬೇಕೆನ್ನುವ ಮಾತನ್ನು ಸಹ ಹೇಳಿದ್ದೇವೆ. ಪ್ರಾಂಶುಪಾಲರು ಮತ್ತು ಶಿಕ್ಷಕರ ಹುದ್ದೆಗಳಲ್ಲಿ ಈಗಾಗಲೇ 184 ಹುದ್ದೆಗಳನ್ನು ತುಂಬಲಾಗಿದೆ. ಉಳಿದಿದ್ದನ್ನು ಭರ್ತಿ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇವೆ. ಆಕಸ್ಮಿಕವಾಗಿ ಈ ಗೌರವ ಧನದ ಆಧಾರದ

ಮೇಲೆ ತೆಗೆದುಕೊಳ್ಳಲು ಸಾಧ್ಯವಿದ್ದರೆ. ಈ ಹಾನರರಿಯ ಕೊಟ್ಟು ಟೀಚರ್ಸ್‌ನ್ನು ರೆಕ್ರೂಟ್ ಮಾಡಲು ಪರ್ಮಿಷನ್ ಅನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ. ಪ್ರಥಮದರ್ಜೆ ಸಹಾಯಕರ ಹುದ್ದೆಗಳು ಸುಮಾರು 162 ಇದ್ದು ಇದರಲ್ಲಿ 33 ಭರ್ತಿ ಹುದ್ದೆಗಳನ್ನು ಮಾಡಲಾಗಿದೆ. ಉಳಿದದ್ದನ್ನು ಬೇಗ ಭರ್ತಿ ಮಾಡಬೇಕೆಂದು ಲೋಕಸೇವಾ ಆಯೋಗದವರಿಗೆ ಹೇಳಲಾಗಿದೆ. ವಸತಿ ಶಾಲೆಗಳಿಗೆ 75 ವಾರ್ಡ್‌ನ ಹುದ್ದೆಗಳು ಮಂಜೂರಾಗಿದ್ದು ಇದರಲ್ಲಿ 34 ಹುದ್ದೆಗಳನ್ನು ಈಗಾಗಲೇ ತುಂಬಿದ್ದೇವೆ ಮತ್ತು ಉಳಿದ 41 ಹುದ್ದೆಗಳನ್ನು ತುಂಬಲು ಈ ನೇರ ನೇಮಕಾತಿ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಒಟ್ಟಾರೆ 464 ಗ್ರೂಪ್ 'ಡಿ' ಹುದ್ದೆಗಳು ಮಂಜೂರಾಗಿದ್ದು ಇದರಲ್ಲಿ 174 ಹುದ್ದೆಗಳು ಭರ್ತಿಯಾಗಿವೆ. ಇನ್ನು 290 ಹುದ್ದೆಗಳನ್ನು ತುಂಬಲು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗುವ ಸಮಿತಿಗೆ ಅಧಿಕಾರವಿದ್ದು ಅದನ್ನು ಬೇಗ ತುಂಬಬೇಕೆಂದು ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಈ ಎರಡು ಕೆಲಸಗಳು ಸಮರ್ಪಕವಾಗಿ ಆಗಬೇಕೆಂದು ಸರ್ಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಕಾಲಮಿತಿ ಹಾಕಿಕೊಂಡು ಕಟ್ಟಡದ ಕೆಲಸಗಳನ್ನು ಮುಗಿಸುತ್ತೇ ಎನ್ನುವ ಭರವಸೆಯನ್ನು ಮಾನ್ಯ ಮಂತ್ರಿಯವರು ಕೊಟ್ಟಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಬಹುತೇಕ ಹಾಸ್ಟೆಲ್‌ಗಳ ಪರಿಸ್ಥಿತಿ ಕೊಳಚೆಯ ಕೂಪ ಆಗಿರುವುದು ತಮ್ಮ ಗಮನಕ್ಕೆ ಬಂದಿರಬಹುದು ಉಪ್ಪಿಟ್ಟು ಎಂದು ಕೊಡುತ್ತಾರೆ. ಅದನ್ನು ನೋಡಲು ಕೂಡ ಆಗುವುದಿಲ್ಲ. ನಾನು ಅನೇಕ ಹಾಸ್ಟೆಲ್‌ಗಳಿಗೆ ಖುದ್ದಾಗಿ ಹೋಗಿ ನೋಡಿದ್ದೇನೆ. ಬಹಳಷ್ಟು ಜನ ವಾರ್ಡನ್‌ಗಳು ಬೆಳಿಗ್ಗೆಯೇ ಸಾರಾಯಿ ಕುಡಿದಿರುತ್ತಾರೆ ಮತ್ತು ಕುಕ್‌ಗಳೇ ಪಾಠ ಹೇಳುವಂತಹ ಪರಿಸ್ಥಿತಿ ಬಂದಿದೆ. ತಮಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ 400 ಪ್ರಾಥಮಿಕ ಶಾಲೆಗಳಿಗೆ, ಇದರಲ್ಲಿ 304 ವೆಕೆನ್ಸಿಗಳು ಖಾಲಿ ಅವುಗಳನ್ನು ತುಂಬುವುದಕ್ಕೆ ಬದಲಾಗಿ ಆ ಶಾಲೆಗಳನ್ನು ಮುಚ್ಚಿಬಿಟ್ಟರೆ, ಹಾಳಾಗಿ ಹೋಗಲೆಂದು ರೈತರು ಏನೋ ಮಾಡಿಕೊಳ್ಳುತ್ತಾರೆ. ವಸತಿ ಶಾಲೆಗಳು ಎಂದರೆ ತಂದೆತಾಯಿಗಳು ನಿಮ್ಮದೇ ಜವಾಬ್ದಾರಿ ಎಂದು ಮಕ್ಕಳನ್ನು ತಂದು ಬಿಟ್ಟುಬಿಡುತ್ತಾರೆ. ಹಿಂದಳಿದ ವರ್ಗದವರಿಗೆ, ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ವರ್ಗದವರಿಗೆ ಬಡಮರ ಮಕ್ಕಳಿಗೆ ನೇರವಾಗಿ ಸ್ವಲ್ಪ ಅನ್ನ ಕೊಡತಕ್ಕಂಥ ಕಾರ್ಯಕ್ರಮವೆಂದರೆ ಇದೊಂದೇ ಈ ಕಾರ್ಯಕ್ರಮಕ್ಕೆ ಇವತ್ತು ಇಷ್ಟೊಂದು ಅನಾಧಾರಣೆಯಾಗಿದೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾಗಿವೆ ಒಬ್ಬರನ್ನಾಗದರೂ ನೇಮಕ ಮಾಡಿಕೊಳ್ಳಲು ನಿಮ್ಮ ಸರ್ಕಾರಕ್ಕೆ ಶಕ್ತಿ ಇಲ್ಲವೇ? ಇದರಲ್ಲ ತೊಂದರೆಯಾಗಿರುವುದೇನೆಂಬುದು ನನಗೆ ಅರ್ಥವಾಗುತ್ತಿಲ್ಲ. ಅಲ್ಲಿ ಅಡಿಗೆ ಮಾಡುವವರು ಪಾಠ ಮಾಡಬೇಕಾ? ಕಳೆದ ಅಧಿವೇಶನದಲ್ಲೂ ಕೂಡ ನಾನು ಈ ಮಾತನ್ನು ಕೇಳಿದ್ದೇನೆ. ಅದರ ಹಿಂದಿನ ಅಧಿವೇಶನದಲ್ಲೂ ಕೂಡ ಇದನ್ನು ಕೇಳಿದ್ದೇನೆ ಈಗ ಮೂರನೇ ಭಾರಿಗೆ ಈ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಸ್ಕೂಲ್ ಮೇಸ್ಟ್ರುಗಳನ್ನು ನೇಮಕ ಮಾಡಿಕೊಳ್ಳಲಾಗುವುದಿಲ್ಲವೆಂದರೆ ಹೇಗೆ? ಕೆಲಸಕ್ಕೆ ಬಾರದವರನ್ನು ಡೆಪ್ಯೂಟೇಷನ್ ಮೇಲೆ ಕೊಡುತ್ತಾರೆ. ಅವರು ಡಿಸ್ಟ್ರಿಕ್ಟ್ ಹೆಡ್ ಕ್ವಾಟ್ರಸ್‌ನಲ್ಲಿರುತ್ತಾರೆ. 12 ಗಂಟೆಗೆ ಬಂದು 3 ಗಂಟೆಗೆ ಹೊರಟು ಹೋಗುತ್ತಾರೆ. ಅದಕೋಸ್ಕರ ನಾನು ಆ ವಸತಿ ಶಾಲೆಗಳು ಕೊಳಚೆಯ ಕೂಪಗಳಾಗಿವೆ ಎಂದು ಹೇಳಿದ್ದು ಎಲ್ಲಿಯವರೆಗೆ ನಿಮಗೆ ಟೀಚರ್ಸ್ ಕುಕ್ಸ್‌ಗಳನ್ನು ನೇಮಕಾತಿ ಮಾಡಲಾಗುವುದಿಲ್ಲವೋ ಅಲ್ಲಿಯವರೆಗೆ 6 ತಿಂಗಳು

ರಜೆ ಎಂದು ಡಿಕ್ಲೇರ್ ಮಾಡಿಬಿಡಿ, ತೊಂದರೆ ಏನು? ಕೂಲಿಯನ್ನಾದರೂ ಮಾಡಿಕೊಂಡು ಆ ಮಕ್ಕಳು ಬದುಕಿಕೊಳ್ಳುತ್ತವೆ. ಇದನ್ನು ಇನ್ನು 6 ತಿಂಗಳೊಳಗಡೆ ವಿಶೇಷ ಕಾರ್ಯಕ್ರಮವೆಂದು ತೆಗೆದುಕೊಳ್ಳದೆ ಹೋದರೆ ಹಿಂದುಳಿದವರ್ಗದವರಿಗೆ ಮಾಡುವ ದೊಡ್ಡ ಮೋಸವಾಗುತ್ತದೆ. ವಿಳಂಬವಿಟ್ಟು ಅದನ್ನು ಮಾಡಬೇಡಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೆ, ನಮ್ಮ ಹಿರಿಯ ಮಾನ್ಯ ಸದಸ್ಯರು ಹೇಳಿದ ವಿಚಾರ ಬಹಳ ಗಂಭೀರವಾಗಿದೆ. ಅವರ ಕ್ಷೇತರ್ದಲ್ಲಿ ಆ ವಿಚಾರಗಳು ಅವರ ಗಮನಕ್ಕೇನು ಬಂದಿದೆ ಅದು ನನ್ನ ಕ್ಷೇತ್ರದಲ್ಲೂ ಆದನ್ನು ನಾನು ನೋಡಿದ್ದೇನೆ. ನಾನು ಹೊಸ ಖಾತೆಯನ್ನು ವಹಿಸಿಕೊಂಡು ಒಂದು ವಾರವಾಯಿತು. ವಸತಿ ಶಾಲೆಗಳಲ್ಲಿ ಮಕ್ಕಳಿಗೆ ಸಕಾಲದಲ್ಲಿ ಆಹಾರವನ್ನು ಕೂಡದಿರುವುದು, ಸರಿಯಾಗಿ ಪಾಠ ಹೇಳಿಕೊಡದಿರುವುದು, ಪಾಠ ಹೇಳಿಕೊಡಲು ಶಿಕ್ಷಕರಿಲ್ಲದಿರುವುದು ತಮ್ಮ ಮಟ್ಟಿಗಲ್ಲದಿದ್ದರೂ ಸ್ವಲ್ಪಮಟ್ಟಿಗಾರೂ ನಮಗೂ ಅರಿವಿದೆ ಏಕೆಂದರೆ 1972ರಲ್ಲೇ ನಾವು ಅನಾಥ ಆಶ್ರಮಗಳನ್ನು ಆರಂಭ ಮಾಡಿದ್ದೇವು. ಬಡವರ ಮಕ್ಕಳಿಗೆ ತೊಂದರೆಯಾಗುತ್ತದೆ ಆದ್ದರಿಂದ ಇದನ್ನು ಕಾಲಮಿತಿ ಹಾಕಿಕೊಂಡು 6 ತಿಂಗಳೊಳಗೆ ಮಾಡಿ ಎಂದು ಬಹಳ ವ್ಯಾಕುಲದಿಂದ ಅವರು ಹೇಳಿದ್ದಾರೆ. ಹಾಗೆ 6 ತಿಂಗಳೊಳಗೆ ಮಾಡಲು ಸಕಲ ಪ್ರಯತ್ನಗಳನ್ನು ಮಾಡಿ ನಿಮ್ಮ ಮಾತಿಗೆ ಧ್ವನಿಗೂಡಿಸುತ್ತೇನೆಂದು ಹೇಳುತ್ತೇನೆ.

ಶ್ರೀ ಎಸ್.ಎಸ್ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮುಳಗುಂದದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ಬರೆಯುತ್ತೀರಿ. ಜಾಗವಿಲ್ಲವೆಂದು ಕೆಲವಕ್ಕೆ ಬರೆಯುತ್ತೀರಿ, ಜಾಗ ಕೊಟ್ಟು ಎರಡು ವರ್ಷವಾದರೂ ಕೂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ಬರೆಯುತ್ತೀರಿ; ಎಂದಿನಿಂದ ಅದನ್ನು ಪ್ರಾರಂಭ ಮಾಡುತ್ತೀರೆಂಬುದನ್ನು ನಿಖರವಾಗಿ ಹೇಳಬೇಕು. ಇನ್ನು ಹಿಂದುಳಿದ ತಾಲ್ಲೂಕುಗಳಿಗೆ ಆ ಮುರಾರ್ಜಿ ದೇಸಾಯಿ ವಸತಿ ಶಾಲೆಗಳು ಬೇಕಾಗಿವೆ. ಅವನ್ನು ಕೂಡ ಯಾವಾಗ ಪ್ರಾರಂಭ ಮಾಡುತ್ತೀರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ಕೇಳಬಯತ್ತೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಸಿಂಧ್ಯಾರವರು ಆ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಅಲ್ಲಿ ಇರುವುದನ್ನು ಸರಿ ಮಾಡುವ ಕೆಲಸ ಮಾಡುವುದಿದ್ದರೆ ಮಾಡಿ ಇಲ್ಲದಿದ್ದರೆ ಮುಚ್ಚಿ ಎಂದು ಹೇಳಿದ್ದಾರೆ. ಇನ್ನು ಹೊಸದಾಗಿ ಮಾಡುವ ಪ್ರಶ್ನೆ ಈಗ ಸರ್ಕಾರಕ್ಕೆ ಇದೆಯೇ ಅಲ್ಲಿ ಇರುವಂಥ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಕೊಡುವಂಥಾದ್ದು, ಶಿಕ್ಷಕರನ್ನು ಕೊಡುವಂಥಾದ್ದು, ವಾರ್ಡನ್‌ಗಳನ್ನು ಕೊಡುವಂಥಾದ್ದು ಮತ್ತು ಇನ್ನುಳಿದ ಸ್ಟಾಫ್‌ಗಳನ್ನು ಭರ್ತಿ ಮಾಡುವಂಥ ಕೆಲಸ ಮಾಡಬೇಕು. ಮುಖ್ಯವಾಗಿ ಅವುಗಳಿಗೆ ಕಟ್ಟಡಗಳನ್ನು ಕೊಡಿ, ಅವುಗಳು ಸ್ಲಂಗಳಿಗಿಂತ ಅಧ್ವಾನವಾಗಿವೆ ಎಂದು ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ಈಗ ಸರ್ಕಾರ ಮೊದಲನೇ ಅಧ್ಯತೆಯನ್ನು ಅದಕ್ಕೆ ಮಾತ್ರ ಕೊಡುತ್ತಿದೆ. ಜೊತೆಗೆ ತಾವು ಕೇಳಿರುವ ಕೆಲಸದ ವಿಚಾರಕ್ಕೆ ಸಂಬಂಧಿಸಿದಂತೆ, ಎರಡು ತಿಂಗಳೊಳಗೇ ಪ್ರಾರಂಭ ಮಾಡಿಸುತ್ತೇನೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಸಚಿವರು ಹಿಂದೆ ಪಶುಸಂಗೋಪನೆ ಸಚಿವರಾಗಿದ್ದಾಗಲೂ ಹೀಗೆ ಹೇಳುತ್ತಾ ಎರಡೂವರೆ ವರ್ಷಗಳನ್ನು ಕಳೆದಿದ್ದು ಒಂದು

ದವಾಖಾನೆಯನ್ನೂ ಶುರು ಮಾಡಲಿಲ್ಲ. ಈಗ ಇದನ್ನೂ ಹಾಗೇ ಮಾಡುತ್ತೀರೋ, ಏನೋ ಎನ್ನುವ ಸಂಶಯ. ಇದು ಮುಗಿಯಬೇಕು. ಆಮೇಲೆ ಬೇರೆಯದು ಶುರು ಮಾಡುತ್ತೇವೆ ಎನ್ನುವ ಇದೇ ಉತ್ತರವನ್ನು ಹೇಳುತ್ತೀರಿ.

ಶ್ರೀ ಎ. ಕೃಷ್ಣಪ್ಪ– ಹಿರಿಯ ಮಾನ್ಯ ಸದಸ್ಯರು ಹೀಗೆ ಮಾತನಾಡುವುದು ಸರಿಯಲ್ಲವೆಂದು ಕಾಣುತ್ತದೆ. ಮಾನ್ಯ ಸಭಾಧ್ಯಕ್ಷರು ಅನುಮತಿ ಕೊಟ್ಟರೆ, ನಾನು ಪಶು ಸಂಗೋಪನಾ ಇಲಾಖೆಯ ಮಂತ್ರಿಯಾಗಿ ಏನೇ ಮಾಡಿದ್ದೇನೆ ಎನ್ನುವುದು ಹೇಳುತ್ತೇನೆ. ನೀವು ಏನು ಮಾಡಿದ್ದಿರಿ ಎನ್ನುವುದನ್ನೂ ನಾನು ಹೇಳಬಲ್ಲೆ. ಆದರೆ ಈಗ ಅದು ಬೇಡ ತಾವು ಹೊಸ ಹಾಸ್ಪೆಲ್‌ಗಳನ್ನು ಪ್ರಾರಂಭ ಮಾಡುವ ವಿಚಾರವನ್ನು ಕೇಳಿದ್ದೀರಿ. ನಾವು ಹೊಸ ಹಾಸ್ಪೆಲ್‌ಗಳನ್ನು ಪ್ರಾರಂಭ ಮಾಡಲು ಹೋಗುವುದಿಲ್ಲ. ಆದರೆ ಬಡವರ ಮಕ್ಕಳಿಗೆ ತೊಂದರೆಯಾಗುತ್ತದೆ ಎನ್ನುವುದಾದರೆ ಈಗಿರುವಂಥ ಹಾಸ್ಪೆಲ್‌ಗಳಿಗೆ ಎಷ್ಟು ಅಡಿಷನಲ್ ಸೀಟುಗಳು ಬೇಕು ಎನ್ನುವುದನ್ನು ಬೆರದುಕೊಡಿ, ಅದನ್ನು ನಾವು ಮಾಡಿಸುತೇವೆ.

ಈ ಹಂತದಲ್ಲಿ ಶಾಸಕರು ಮಾನ್ಯ ಅಮರೇಗೌಡ ಬಯ್ಯಾಪುರ ಲಿಂಗನಗೌಡರು ಉಪಪ್ರಶ್ನೆಯನ್ನು ಕೇಳಲು ಎದ್ದುನಿಂತರು)

ಅಧ್ಯಕ್ಷರು:– ಮಾನ್ಯ ಸದಸ್ಯರುಗಳು ದಯವಿಟ್ಟು ಗಮನಿಸಬೇಕು. ಇನ್ನೂ ನಮ್ಮ ಮುಂದ ' 8 ಪ್ರಶ್ನೆಗಳಿವೆ. ಉಳಿದಿರುವುದು 20 ನಿಮಿಷಗಳ ಕಾಲಾವಕಾಶ ಮಾತ್ರ. ಒಂದೊಂದು ಪ್ರಶ್ನೆಗೆ ಎರಡೆರಡು ನಿಮಿಷಗಳ ಕಾಲಾವಕಾಶ ಕೊಡಲೇ?

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ:– ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಪ್ರಶ್ನೆ. ಇದಕ್ಕೆ ಹೆಚ್ಚು ಸಮಯ ತೆಗೆದುಕೊಂಡರೂ ಅಡ್ಡಿಯಿಲ್ಲ. ಇದು ರಾಜ್ಯದಾದ್ಯಂತ ಇರುವ ಬಡ ಮಕ್ಕಳಿಗೆ ಉಪಯೋಗವಾಗುವಂಥ ಕಾರ್ಯಕ್ರಮವಾಗಿರುವುದರಿಂದ, ದಯವಿಟ್ಟು ಇದಕ್ಕೆ ಹೆಚ್ಚಿನ ಸಮಯದ ಅವಶ್ಯಕತೆಯಿದೆ. ಬೇರೆ ಯಾವುದಕ್ಕಾದರೂ ಸಮಯವನ್ನು ಕಡಿಮೆ ಮಾಡಿ.

ಅಧ್ಯಕ್ಷರು:– ನನಗೂ ಗೊತ್ತಿದೆ, ಇಲ್ಲಿ ಬರುವ ಪ್ರಶ್ನೆಗಳೆಲ್ಲಾ ಗಂಭೀರವಾದವುಗಳೇ. ಅರ್ಧಗಂಟೆ ಚರ್ಚ್‌ಗೆ ಬರೆದು ಕಳುಹಿಸಿ ಚರ್ಚೆ ಮಾಡೋಣ ದಯವಿಟ್ಟು ಕ್ಷಮಿಸಿ, ಹೆಚ್ಚು ಕಲಾವಕಾಶ ಕೊಡಲಾಗುವುದಿಲ್ಲ. ಇಲ್ಲದಿದ್ದರೆ ನಾನು ಪ್ರಶ್ನೋತ್ತರ ವೇಳೆಯನ್ನು ಇಲ್ಲಿಗೇ ಮುಗಿಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಯಾವಾಗಲ್‌ರವರೇ, ನೀವು ಕೇಳಿ.

ಶ್ರೀ ಬಿ.ಆರ್. ಯಾವಗಲ್:– ನಾನು ಕೇಳಬೇಕಾದಂಥ ಪ್ರಶ್ನೆಗೆ ಮಾನ್ಯ ಸಚಿವರು ಸ್ವಲ್ಪಮಟ್ಟಿಗೆ ಉತ್ತರವನ್ನು ಕೊಟ್ಟಿದ್ದಾರೆ. ವಿವಿಧ ತಾಲ್ಲೂಕುಗಳಲ್ಲಿ 170 ವಸತಿ ಶಾಲೆಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವು ಪ್ರಾರಂಭವಾಗಿರಬಹುದು. ಇನ್ನು ಕೆಲವು ಪ್ರಾರಂಭವಾಗಿರಲಿಕ್ಕಿಲ್ಲ. ಒಂದು ಮತಕ್ಷೇತ್ರದಲ್ಲಿ 2-3 ಶಾಲೆಗಳು ಆದಂಥ ನಿದರ್ಶನಗಳಿವೆ. ಆದರೆ ಕೆಲವು ಕಡೆ ಇಲ್ಲವೇ ಇಲ್ಲ. ಆದ್ದರಿಂದ, ಇವುಗಳನ್ನು ವ್ಯವಸ್ಥಿತವಾಗಿ ತಾಲ್ಲೂಕಿಗೊಂದರಂತೆ ಕೊಡುವ ವ್ಯವಸ್ಥೆಯನ್ನು ಯಾವಾಗ ಮಾಡುತ್ತಾರೆ ಎನ್ನುವ ಬಗ್ಗೆ ಅವರು ಸ್ಪಷ್ಟವಾಗಿ ಹೇಳಬೇಕು.

ಹೆಚ್ಚಿರುವ ಕಡೆ ತೆಗೆದು, ಇಲ್ಲದೇ ಇರುವ ಕಡೆ ತಾಲ್ಲೂಕಿಗೊಂದರಂತೆ ಕೊಡುತ್ತಾರೆಯೇ ಎನ್ನುವ ಬಗ್ಗೆ ಹೇಳಬೇಕು.

ಶ್ರೀ ಬೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಲು ನನಗೆ ಅವಕಾಶ ಕೊಡಬೇಕು. ನನ್ನ ಕ್ಷೇತ್ರವಾದ ಹೇಮಗಿರಿ ಕ್ಷೇತ್ರವೂ ಸೇರಿದಂತೆ ಈ ವರ್ಷ ಏಳು ವಸತಿ ಶಾಲೆಗಳನ್ನು ಪ್ರಾರಂಭ ಮಾಡಬೇಕು ಎನ್ನುವ ಪ್ರಸ್ತಾಪ ಸರ್ಕಾರದ ಮುಂದೆ ಇದೆ. ಮಾನ್ಯ ಮಂತ್ರಿಗಳು ಇಲ್ಲಿ ಏನು ಹೇಳುತ್ತಾರೆ ಅದು ಸರ್ಕಾರದ ತೀರ್ಮಾನವಾಗುವುದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಅವರಿಗೆ ಈ ವಿಷಯ ತಿಳಿದಿದೆಯೋ, ಇಲ್ಲವೋ ಗೊತ್ತಿಲ್ಲ. ಏಳು ಶಾಲೆಗಳನ್ನು ಈ ವರ್ಷ ಪ್ರಾರಂಭ ಮಾಡಲು ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಈಗ ಅವರು ಈ ವರ್ಷ ನಾವು ಯಾವುದೇ ಹೊಸ ಶಾಲೆಗಳನ್ನು ಪ್ರಾರಂಭ ಮಾಡುವುದಿಲ್ಲ ಎಂದು ಹೇಳಿಬಿಟ್ಟರೆ ನಾಳೆಯ ದಿವಸ ಅವರು, ನಾವು ಎಲ್ಲರೂ ಇಕ್ಕಟ್ಟಿಗೆ ಸಿಕ್ಕಿಹಾಕಿ ಕೊಳ್ಳುತ್ತೇವೆ. ಆದ್ದರಿಂದ ದಯಮಾಡಿ ಮಾನ್ಯ ಮಂತ್ರಿಗಳು ಹೇಳಬೇಕು ಎಷ್ಟು ಶಾಲೆಗಳನ್ನು ಈ ವರ್ಷ ಪ್ರಾರಂಭ ಮಾಡಲು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೋ ಅವುಗಳನ್ನಾದರೂ ಪ್ರಾರಂಭ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ, ನಾನು ಒಂದು ವರ್ಷ ಕಾಲ ಪ್ರಯತ್ನ ಮಾಡಿ ಅದಕ್ಕೆ 20 ಎಕರೆ ಜಮೀನನ್ನು ಕೊಡಿಸಿದ್ದೇನೆ. ಸಂಬಂಧಪಟ್ಟ ಫೈಲು ಫೈನ್ಯಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕನ್‌ಕರೆನ್ಸ್‌ಗೆ ಹೋಗಿದೆ. ಅವರು ಇತ್ತೀಚೆಗೆ ಈ ಖಾತೆಗೆ ಬಂದಿರುವುದರಿಂದ ಅವರಿಗೆ ಈ ಮಾಹಿತಿ ಗೊತ್ತಿಲ್ಲದೇ ಇರಬಹುದು. ನನಗೆ ಆ ಬಗ್ಗೆ ಮಾಹಿತಿ ಇರುವುದರಿಂದ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಆ ಏಳು ಶಾಲೆಗಳನ್ನು ಈ ವರ್ಷ ಪ್ರಾರಂಭ ಮಾಡಲು ಪ್ರಯತ್ನ ಮಾಡಬೇಕು. ಹಾಸ್ಟೆಲ್‌ಗಳು ಕಟ್ಟಿವೆ. ಶಾಲೆಗಳು ಕೆಟ್ಟಿವೆ ಎಂದು ಮಾನ್ಯ ಸಿಂಧ್ಯಾರವರು ಹೇಳಿದರು. ಅದಕ್ಕಾಗಿ ಮುಂದೆ ಪ್ರಾರಂಭ ಮಾಡುವ ಹೊಸ ಶಾಲೆಗಳನ್ನು ನಿಲ್ಲಿಸುತ್ತೇವೆ ಎನ್ನುವ ಪ್ರವೃತ್ತಿ ಸರಿಯಲ್ಲ. ಕೆಟ್ಟದ್ದನ್ನು ಸರಿಮಾಡಬೇಕು. ಹೊಸದನ್ನು ಮಾಡಬೇಕು. ಈಗಿರುವಂಥವು ಕೆಟ್ಟಿವೆ. ಆದ್ದರಿಂದ ಮುಂದೆ ನಾವು ಹೊಸದನ್ನು ಮಾಡುವುದೇ ಇಲ್ಲ ಎಂದರೆ ನಮಗೆ ಕಷ್ಟವಾಗುತ್ತದೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದನ್ನು ಸರಿ ಮಾಡಿ, ಹೊಸದನ್ನು ಪ್ರಾರಂಭ ಮಾಡಬೇಕು.

ಅಧ್ಯಕ್ಷರು:- ಮಾನ್ಯ ಕೃಷ್ಣಪ್ಪನವರೆ ಎಲ್ಲರೂ ಪ್ರಶ್ನೆಗಳನ್ನು ಕೇಳಿಬಡಲಿ. ನಂತರ ನೀವು ಒಂದೇ ಸಲ ಉತ್ತರ ಕೊಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದ ಅವಧಿಯಲ್ಲಿ ಪ್ರಾರಂಭ ಮಾಡಿದ ಈ ಯೋಜನೆಗೆ ಎಲ್ಲೆಲ್ಲಿ ಭೂಮಿ ಲಭ್ಯವಿದೆ. ಅಲ್ಲಿ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಟೆಂಡರ್ ನಿಯಮಗಳ ಪ್ರಕಾರ ನನ್ನ ಕ್ಷೇತ್ರದಲ್ಲೂ ಸಹ ಒಂದು ವರ್ಷದ ಹಿಂದೆಯೇ ಕಟ್ಟಡಕಟ್ಟಿ ಮುಗಿಸಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಅದನ್ನು ಮುಂದೂಡುತ್ತಾ ಬಂದಿದ್ದು, ಈ ವರ್ಷ ಶಾಲೆಗಳು ಪ್ರಾರಂಭವಾಗಿದ್ದರೂ ನಾವು ಹೊಸ ಕಟ್ಟಡಕ್ಕೆ ಶಿಫ್ಟ್ ಮಾಡಲು ಆಗಿಲ್ಲ. ಆದ್ದರಿಂದ, ಅದನ್ನು ಬೇಗ ಮುಗಿಸಿ ಕೊಡುವಂಥ ಕೆಲಸ ಆಗಬೇಕು. ಮುರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಒಂದು ಡೈರೆಕ್ಟೋರೇಟ್ ಮಾಡಿ ಒಬ್ಬ ಡೈರೆಕ್ಟರನ್ನು ನೇಮಕ ಮಾಡಿರುವುದರಿಂದ, ಜಿಲ್ಲಾ ಪರಿಷತ್ತಿನವರಾಗಲೀ, ಶಿಕ್ಷಣ ಇಲಾಖೆಯವರಾಗಲೀ ಇಲ್ಲಿಗೆ ಟೀಚರ್‌ಗಳನ್ನು ಪೋಸ್ಟ್

ಮಾಡುತ್ತಿಲ್ಲ. ಹಾಗಾಗಿ ಇಲ್ಲಿಗೆ ಶಿಕ್ಷಣ ಇಲಾಖೆಯಿಂದ ಡೆಪ್ಯುಟೇಷನ್ ಮೇಲೆ ಬಂದಿದ್ದಂಥ ಟೀಚರ್‌ಗಳು ತಾವು ದೂರದ ಊರುಗಳಿಗೆ ಹೋಗಿ ಕೆಲಸ ಮಾಡಬೇಕಾಗುತ್ತದೆ ಎಂದು ಡೆಪ್ಯುಟೇಶನ್‌ಗಳನ್ನು ಕ್ಯಾನ್ಸಲ್ ಮಾಡಿಸಿಕೊಂಡು, ಬೇರೆಬೇರೆ ಜಾಗಗಳಿಗೆ ವರ್ಗ ಮಾಡಿಸಿಕೊಂಡು ಹೋಗಿದ್ದಾರೆ. ಹಾಗಾಗಿ, ಹಿಂದೆ ಇದ್ದಂಥ ಟೀಚರ್‌ಗಳೂ ಸಹ ಈ ವರ್ಷ ಅಲ್ಲಿ ಲಭ್ಯವಿಲ್ಲ. ಆದ್ದರಿಂದ ನೇರ ನೇಮಕ ಮಾಡಿಕೊಂಡು, ಕೊರತೆಯಿರುವ 1,060 ಹುದ್ದೆಗಳನ್ನು ತುಂಬಬೇಕು. ಇಲ್ಲದಿದ್ದರೆ, ಈ ವರ್ಷ ಈ ಶಾಲೆಗಳ್ಯಾವುವೂ ಕೂಡ ಸಮರ್ಪಕವಾಗಿ ವಿದ್ಯಾಭ್ಯಾಸ ಕೊಡಲು ಸಾಧ್ಯವಾಗುವುದಿಲ್ಲ.

(ಈ ಹಂತದಲ್ಲಿ ಸದಸ್ಯರಾದ ಮಾನ್ಯ ಎ. ನಾರಾಯಣಸ್ವಾಮಿಯವರು ಪ್ರಶ್ನೆ ಕೇಳಲು ಎದ್ದು ನಿಂತರು)

ಅಧ್ಯಕ್ಷರು:- ಹೀಗೆ ಎಲ್ಲರೂ ಎದ್ದು ನಿಂತರೆ ಹೇಗೆ? ಎಲ್ಲರೂ ಪ್ರಶ್ನೆ ಕೇಳಬಹುದು. ಅದಕ್ಕೆ ನನ್ನದೇನೂ ಲಭ್ಯಂತರವಿಲ್ಲ. ಹೀಗಾದರೆ ನಾನು ಪ್ರಶ್ನೋತ್ತರ ವೇಳೆಯನ್ನು ಮುಗಿಸುವುದು ಹೇಗೆ? ಇನ್ನೂ ಎಂಟು ಪ್ರಶ್ನೆಗಳಿವೆ. ನಾನು ಹೇಗೆ ಕಂಪ್ಲೀಟ್ ಮಾಡಬೇಕು? ನೀವೇ ಹೇಳಿ. ಎಲ್ಲರ ಪ್ರಶ್ನೆಗಳೂ ಇಂಪಾರ್ಟೆಂಟೇ. ಯಾವುದು ಇಂಪಾರ್ಟೆಂಟ್ ಅಲ್ಲ ಹೇಳಿ. ಹಾಗಾದರೆ ಏಳು ಪ್ರಶ್ನೆಗಳನ್ನು ಮುಂದಕ್ಕೆ ಹಾಕುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಮುರಾರ್ಜಿ ದೇಸಾಯಿ ಶಾಲೆ ಇದೆ. ಆ ಶಾಲೆ ಪ್ರಾರಂಭವಾಗಿ ಏಳು ವರ್ಷಗಳಾಗಿವೆ. ಅದಕ್ಕೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಕಡತ ಹೋಗಿದೆ. ಕುದಾಯ ಇಲಾಖೆ ಈ ರಾಜ್ಯದಲ್ಲಿದೆಯೋ, ಎಲ್ಲಿದೆಯೋ ನನಗೆ ಅರ್ಥವಾಗುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆಗೆ ಲ್ಯಾಂಡ್ ಹ್ಯಾಂಡ್-ಓವರ್ ಮಾಡಲು ಈ ಇಲಾಖೆಗೆ ನಾಲ್ಕೈದು ವರ್ಷಗಳು ಬೇಕೇ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕು. ಒಂದು ಫೈಲ್ ಕ್ಲಿಯರ್ ಮಾಡಲು ಐದು ವಷಗಳು ಬೇಕು ಎಂದರೆ, ಸರ್ಕಾರದ ಕಾರ್ಯ ವೈಖರಿಯನ್ನು ಗಮನಿಸಬೇಕಾಗಿದೆ. ನಾನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದಷ್ಟು ಬೇಗ ಆ ಫೈಲನ್ನು ಕ್ಲಿಯರ್ ಮಾಡಿಸಬೇಕು. ಈಗಾಗಲೇ ಅದಕ್ಕೆ ಹಣ ಮಂಜೂರಾಗಿದೆ. ಎಷ್ಟು ಬೇಗ ಮಾಡುತ್ತೀರಿ ಎಂದು ಹೇಳಬೇಕು.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಸದಸ್ಯರ ಉಪ ಪ್ರಶ್ನೆಗಳು ನಿಖರವಾಗಿವೆ. ಮೊದಲನೆಯದಾಗಿ, ಟೀಚರ್‌ಗಳು ಮತ್ತು ಕಟ್ಟಡಗಳ ವಿಚಾರವನ್ನು ಕೇಳಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಮಾನ್ಯ ಸಿಂಧ್ಯಾರವರಿಗೆ ಹೇಳುವಾಗ ಉತ್ತರವನ್ನು ಕೊಟ್ಟಿದ್ದೇನೆ. ಈ ಕಡೆಯ ನಮ್ಮ ಹಿರಿಯ ಸದಸ್ಯರು ಏಳು ವಸತಿ ಶಾಲೆಗಳ ಬಗ್ಗೆ ಹೇಳಿದ್ದಾರೆ. ಅವುಗಳ ಬಗ್ಗೆ ನನಗೆ ತಿಳುವಳಿಕೆ ಇದೆ. ಆದರೆ ಅದು ಪ್ರೋಸೆಸ್‌ನಲ್ಲಿದೆ. ಅಂತಿಮವಾಗಿ ನೋಟಿಫಿಕೇಷನ್ನು ಆಗದೇ ಇರುವಂಥಾದ್ದನ್ನು, ನಾವು ಮಾಡುತ್ತೇನೆ ಎಂದು ಈ ಸದನದಲ್ಲಿ ಹೇಳುವುದು ಬೇಡ ಎಂದು ನಾನು ಆಗಲೇ ಹೇಳಲಿಲ್ಲ. ನನ್ನ ಹತ್ತಿರ ಅದರ ಲಿಸ್ಟ್ ಇದೆ. ಅದು ಫೈನ್ಯಾನ್ಸ್‌ನಿಂದ ಡಿಪಾರ್ಟ್‌ಮೆಂಟ್‌ನಿಂದ ವಾಪಸ್ಸು ಬರಬೇಕು. ಬಂದಮೇಲೆ ಹೇಳುತ್ತೇನೆ. ಇನ್ನು, ಮಾನ್ಯ

ನಾರಾಯಣಸ್ವಾಮಿಯವರು ಆನೇಕಲ್‌ನಲ್ಲಿರುವ ವಸತಿ ಶಾಲೆಯ ವಿಚಾರವಾಗಿ ಹೇಳಿದ್ದಾರೆ. ಅದು ನನ್ನ ಗಮನಕ್ಕೂ ಬಂದಿದೆ. ಮೊನ್ನೆ ಅವರ ಕ್ಷೇತ್ರಕ್ಕೆ ಹೋಗಿದ್ದಾಗ ನಾವು ಈ ವಿಚಾರದ ಬಗ್ಗೆ ಮಾತನಾಡಿದ್ದೇವೆ. ಆದಷ್ಟು ಬೇಗ ಕಂದಾಯ ಇಲಾಖೆಯಿಂದ ಕಡತವನ್ನು ತರಿಸಿಕೊಂಡು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಕೂಡ್ಲಿಗಿ ಪಟ್ಟಣದಲ್ಲಿ ಹಾಲೂ ಶೀಥಲೀಕರಣ ಪ್ರಾರಂಭಿಸುವುದು

37(229):- ಶ್ರೀ ಸಿರಾಜ್ ಶೇಖ್ (ಕೂಡ್ಲಿಗಿ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಕೂಡ್ಲಿಗಿ ಪಟ್ಟಣದಲ್ಲಿ ಹಾಲು ಶೀಥಲೀಕರಣ ಘಟಕ (ಬಲ್ಕ್ ಕೂಲರ್) ಪ್ರಾರಂಭಿಸುವ ಬಗ್ಗೆ ಯೋಜನೆ ಇದೆಯೇ?

2. ಇದ್ದಲ್ಲಿ ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಅದಕ್ಕೆ ತಗಲುವ ವೆಚ್ಚವೆಷ್ಟು?

ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು

1. ಹೌದು

2. ಇದು ಪರಿಶೀಲನೆಯಲ್ಲಿದೆ.

ಶ್ರೀ ಸಿರಾಜ್ ಶೇಖ್:- ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಗೆ ಮಾನ್ಯ ಸಚಿವರು ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಆ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಎನ್ನುವ ನನ್ನ ಎರಡನೆಯ ಪ್ರಶ್ನೆಗೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಇದನ್ನು ಪ್ರಾರಂಭ ಮಾಡಲು ಇರತಕ್ಕಂಥ ಅಡಚಣೆ ಏನು? ಇದನ್ನು ನಿಖರವಾಗಿ ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು ಎಂದು ನಾನು ತಮ್ಮ ಮುಖೇನ ಅವರನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ಮಹದೇವ:- ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲಾ ಪರಿಷತ್ತಿನಿಂದ ಇದಕ್ಕೆ ಪ್ರಪೋಸಲ್ ನಿನ್ನೆ ತಾನೇ ಬಂದಿದೆ. ಈ ಯೋಜನೆಯನ್ನು ಕೆ.ಎಂ.ಎಫ್ ನಲ್ಲಿ ತೆಗೆದುಕೊಳ್ಳಬೇಕೇ ಅಥವಾ ಬೇರೆ ಯೋಜನೆಯಲ್ಲಿ ತೆಗೆದುಕೊಳ್ಳಬೇಕೇ ಎನ್ನುವ ವಿಚಾರದಲ್ಲಿ ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಾವು ಅಧ್ಯಯನ ಮಾಡುತ್ತಿದ್ದೇವೆ. ಅದಕ್ಕೆ ಸುಮಾರು 55 ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಒಂದು ಅಂದಾಜು ಮಾಡಲಾಗಿದೆ. ಅದಕ್ಕೆ ಯಾರು ಜವಾಬ್ದಾರಿ ತೆಗೆದುಕೊಳ್ಳಬೇಕು. ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳುತ್ತದೆ.

ಶ್ರೀ ಸಿರಾಜ್ ಶೇಖ್:- ಈಗಾಗಲೇ ಬಳ್ಳಾರಿ ಜಿಲ್ಲೆಯ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಈ ಘಟಕವನ್ನು ಪ್ರಾರಂಭಿಸಲು ಅದಕ್ಕೆ ಬೇಕಾದ ಹಣವನ್ನು ಕೊಡುವುದಕ್ಕೆ ತೀರ್ಮಾನಿಸಿದ್ದಾರೆ. ಅದಕ್ಕೆ ಬೇಕಾದ ಭೂಮಿಯನ್ನು ಕೂಡ್ಲಿಗಿ ಪಟ್ಟಣದಲ್ಲಿ ಎಪಿಎಂಸಿಯವರು ಕೊಡಲು ತಯಾರಿದ್ದಾರೆ. ಈ ಕಾಮಗಾರಿಯನ್ನು ತಕ್ಷಣ ಪ್ರಾರಂಭಿಸಬೇಕು. ಬಳ್ಳಾರಿ ಜಿಲ್ಲೆಯ